(ಜ) ಕ್ಯಾನ್ಸರ್, ಹೃದ್ರೋಗ ಚಿಕಿತ್ಸೆ ಮತ್ತು ಕಿಡ್ನಿ ಫೇಲಾದಂಥ ರೋಗಿಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಹಾಯಧನ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಅಧ್ಯಕ್ಷರೆ, ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ಕ್ಯಾನ್ಸರ್ ರೋಗ ಮತ್ತು ಹೃದ್ರೋಗ ಚಿಕಿತ್ಸೆ ಸಲುವಾಗಿ ಕಿಡ್ನಿ ಫೇಲಾದಾಗ ಸರ್ಕಾರದಿಂದ 5, 10 , 15 ಸಾವಿರ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಕೊಡುತ್ತೀರಿ. ಅದು ಬಹಳ ತುರ್ತು ಚಿಕಿತ್ಸೆಯಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಹಣ ಇಲ್ಲದೇ ಇರುವುದರಿಂದ, ಕೆಲವು ಸಲ ಹಣ ತಲುಪುವುದರೊಳಗಾಗಿ ಆ ಪೇಷೆಂಟ್ ಸತ್ತುಹೋಗಿರುತ್ತಾನೆ. ಆ ಹಣದ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರ, ನೌಕರರಿಂದ 5 ರಿಂದ 10 ಪರ್ಸೆಂಟ್ ಆಥವಾ ಶಾಸಕರ ಸಂಬಳದಲ್ಲಿ ಯಾವುದೇ ಒಂದು ತಿಂಗಳಲ್ಲಿ ಒಂದು ಸಾವಿರ ರೂಪಾಯಿಗಳನ್ನು ಡಿಡೆಕ್ಷನ್ ಮಾಡುವುದರ ಮೂಲಕ, ಹೆಚ್ಚು ಸಂಪನ್ಮೂಲವನ್ನು ಕ್ರೋಢೀಕರಿಸಿ, ಆ ರೋಗಿಗಳಿಗೆ ಹಣವನ್ನು ತಲುಪಿಸಿದರೆ ಅನುಕೂಲವಾಗುತ್ತದೆ ಮತ್ತು ಆ ಹಣದ ಮೊತ್ತವನ್ನು ಕೂಡ ಜಾಸ್ತಿ ಮಾಡಬೇಕು. 60 ರಿಂದ 70 ಸಾವಿರ ಖರ್ಚಾಗುವ ಈ ಆಪರೇಷನ್‌ಗೆ ಕೃಷಿ ಕಾರ್ಮಿಕರಿಗೆ ನಾವು 5-10 ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಕನಿಷ್ಟ 10 ರಿಂದ 15 ಸಾವಿರ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿ ಸಂಪನ್ಮೂಲವನ್ನು ಕ್ರೋಢೀಕರಿಸುವುದರ ಮೂಲಕ ಚಿಕಿತ್ಸೆಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಡಿಸ್ಕ್ರಿಷನರಿ ಫಂಡ್ ಇರುತ್ತದೆಯಲ್ಲಾ ಅದಕ್ಕೆ ರಿಸೋರ್ಸಸ್ ಮೊಬಿಲೈಸ್ ಮಾಡಿ ಇನ್ನೂ ಹೆಚ್ಚಿಗೆ ಕೊಡಬೇಕೆಂದು, ಹೇಳುತ್ತಿದ್ದಾರೆ. ಇದು ಒಳ್ಳೆಯ ಸಲಹೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ನನಗೆ ಸರಿಯಾದ ಅಂಕಿ ಅಂಶ ಗೊತ್ತಿಲ್ಲ. ಬಹುಶಃ ಹೋದ ವರ್ಷ ಮತ್ತು ಈ ವರ್ಷದ ಒಂದರಿಂದ ಒಂದೂವರೇ ಕೋಟಿ ರೂಪಾಯಿಗಳಾಗಿದ್ದು ಅದು ಹತ್ತು ಪಟ್ಟು ಜಾಸ್ತಿಯಾಗಿದೆ. ರಿಸೋರ್ಸ್ ಮೊಬಿಲೈಸ್‌ಗೆ we are also getting it from the public undertakings. ಬೇರೆ ಯಾರಾದರೂ ಚಾರಿಟಿ ಕೊಡುವುದಾದರೆ, ನಾವು ಅದನ್ನೂ ಸ್ವೀಕಾರ ಮಾಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ :— ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದರ ಜೊತೆಗೆ, ಇನ್ನೊಂದು ಹಿಂದೆ ಇದ್ದಂಥ ಒಂದು ಶೇಕರಿತ ನಿಧಿಯಿಂದ ಒಂದು ಜಿಲ್ಲೆಗೆ ಸುಮಾರು 5 ಲಕ್ಷ 10 ಲಕ್ಷ ಹಾಗೂ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅದರ ಕಾರ್ಯದರ್ಶಿಗಳಾಗಿರುತ್ತಾರೆ. ಅಲ್ಲಿಯೇ ಅರ್ಜಿಯನ್ನು ಕೊಟ್ಟರೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಜೊತೆಗೆ ಆ ಹಣ ಕೂಡ ಬರುತ್ತದೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅದರ ಅಧ್ಯಕ್ಷರಾಗಿರುತ್ತಾರೆ.